ಇಂದು ದಿಃ **29-01-2025** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಎಂ.ಎಸ್.ಎಂ ವಕೀಲರಿಂದ 1 ರಿಂದ 3 ನೇ ಪ್ರತಿವಾದಿಯರ ಪರ:**

ನಂಬರ್ ಕಾಣದ ಬಂಜರು ಜಮೀನು ಎಂದು ಈ ಹಿಂದೆ ಸರ್ವೆ ನಂಬರ್ 8 ಇದ್ದು, ಅದು ಕೃಷಿ ಭೂಮಿ ಎಂದರೆ ಸಾಕ್ಷಿ ಅದು ಭೂಪರಿವರ್ತನೆಯಾಗಿರುತ್ತದೆ ಎಂದು ಹೇಳುತ್ತಾರೆ. ಶೆಡ್ಯೂಲ್ ಸಿ ಯ ನಿವೇಶನಗಳು ಈ ಸರ್ವೆ ನಂಬರ್ 8 ರಲ್ಲಿ ಬರುತ್ತವೆ ಎಂದರೆ ಸರಿ. ನನ್ನ ತಾಯಿ ವಾಸ ಮಾಡುತ್ತಿರುವ ಮನೆ ಯಾವ ಸೈಟ್ ನಂಬರ್ ನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ, ಸಾಕ್ಷಿ ಚಕ್ ಬಂದಿ ಹೇಳ ಬಹುದು ಎಂದು ಹೇಳುತ್ತಾರೆ. ಅದೇ ರೀತಿ ಮನೆಯ ಮುಂಭಾಗದಲ್ಲಿ ಮತ್ತು ಪಕ್ಕದಲ್ಲಿರುವ ಮಳಿಗೆಗಳು ಯಾವ ಸೈಟ್ ನಂಬರ್ ನಲ್ಲಿ ಬರುತ್ತವೆ ಎಂದು ನನಗೆ ನಂಬರ್ ಹೇಳಲು ಆಗುವುದಿಲ್ಲ. ನಾನು ಸಿ ಶೆಡ್ಯೂಲ್ ನಲ್ಲಿ ಕಾಣಿಸಿದ ಮನೆಗಳ ಕುರಿತು ಸಂಪೂರ್ಣ ವಿವರ ನೀಡಿಲ್ಲ ಎಂದರೆ ಸರಿಯಲ್ಲ. ಶೆಡ್ಯೂಲ್ ಸಿ ಆಸ್ತಿಯಲ್ಲಿ ಒಂದು ವಾಸದ ಮನೆ ಮತ್ತು 26 ಮಳಿಗೆಗಳು ಇವೆ. ನಾನು ಈ ಆಸ್ತಿಗಳ ಕುರಿತು ಗ್ರಾಮ ಪಂಚಾಯಿತಿಯವರು ನೀಡಿದ ನಂಬರ್ ಗಳನ್ನು ನಾನು ವಾದಪತ್ರದಲ್ಲಿ ವಿವರವಾಗಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಶೆಡ್ಯೂಲ್ ಸಿ ಯ ಅನುಕ್ರಮ ನಂಬರ್ 23 ಮತ್ತು 24 ರಲ್ಲಿ ಎಷ್ಟು ಮನೆ ಮತ್ತು ಮಳಿಗೆಗಳು ಇವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಈ ಶೆಡ್ಯೂಲ್ ಸಿ ಯಲ್ಲಿರುವ ಎಲ್ಲಾ ನಾನು ನಮೂದು ಮಾಡಿದ ನಿವೇಶನಗಳು ಎಲ್ಲವೂ ಹಳೆಯ ಸರ್ವೆ ನಂಬರ್ 8 ರಲ್ಲಿ ಇದ್ದು, ಅವು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ಸರಿ. ಸರ್ವೆ ನಂಬರ್ 8 ಇದನ್ನು ನನ್ನ ತಂದೆ 1 ನೇ ಪ್ರತಿವಾದಿಗೆ ಆಕೆಗೆ ಅರಿಶಿಣ-ಕುಂಕಮಕ್ಕೆಂದು ಬಿಟ್ಟ ಆಸ್ತಿ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಾಯಿ ಈ ನಿವೇಶನಗಳನ್ನು ತನ್ನ ಹೆಣ್ಣು ಮಕ್ಕಳಿಗೆ ದಾನ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ತಾಯಿಯ ಹೆಸರಿಗೆ ಆಸ್ತಿ ದಾಖಲು ಮಾಡಿಸಿದರು ಎಂದು ಹೇಳುತ್ತಾರೆ. ಈ ವಿಷಯವನ್ನು ಈ ದಾವೆಯಲ್ಲಿ ಅಥವಾ ನಾನು ಈ ಹಿಂದೆ ದಾಖಲು ಮಾಡಿದ್ದ ದಾವೆಯಲ್ಲಿ ತಿಳಿಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ

ಪತ್ರದಲ್ಲಿ ಈ ವಿಷಯ ತೋರಿಸಿಲ್ಲ ಎಂದರೆ ಸರಿ. ಮೊದಲು ನನ್ನ ಮತ್ತು ನನ್ನ ತಾಯಿಯ ಸಂಬಂಧ ಚೆನ್ನಾಗಿತ್ತು, ನನ್ನ ಮದುವೆಯ ನಂತರ ನನ್ನ ಮತ್ತು ನನ್ನ ತಾಯಿಯ ಸಂಬಂಧ ಕೆಟ್ಟಿರುತ್ತದೆ. ನನ್ನ ಮದುವೆ ನನ್ನ ತಂದೆ ಜೀವಂತ ಇದ್ದಾಗಲೇ ಆಗಿರುತ್ತದೆ. ನನ್ನ ಮದುವೆ ಆದ 14 ವರ್ಷಗಳ ನಂತರ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ಮದುವೆಯ ನಂತರ ನಾನು ನರಸಗೊಂಡನಹಳ್ಳಿಯಲ್ಲಿ ವಾಸ ಇದ್ದೇನು ಎಂದರೆ ಸರಿ. ಅದೇ ರೀತಿ ತರಗನಹಳ್ಳಿಯ ಜಮೀನನ್ನು ನೋಡಿಕೊಂಡು ಹೋಗುತ್ತಿದ್ದೆನು ಎಂದರೆ ಸಾಕ್ಷಿ ಎಲ್ಲಾ ನೋಡಿಕೊಂಡು ಹೋಗುತ್ತಿದ್ದೆನು ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ನನ್ನ ನಡುವೆ ಮದುವೆಯ ನಂತರ ಮನಸ್ತಾಪ ಬಂದ ಕಾರಣ, ನಾನು ಪ್ರತ್ಯೇಖವಾಗಿ ವಾಸಿಸಲು ಶುರುಮಾಡಿ, ನನ್ನ ಆಸ್ತಿಗಳನ್ನು ಪ್ರತ್ಯೇಖವಾಗಿ ಅನುಭವಿಸುತ್ತಾ ಬಂದೆನು ಎಂದರೆ ಸಾಕ್ಷಿ ಮನೆಯಲ್ಲಿ ಮನಸ್ತಾಪ ಇದ್ದ ಕಾರಣ ಹೊರಗಡೆ ಬಂದೆನು ಎಂದು ಹೇಳುತ್ತಾರೆ. ನಾನು, ನನ್ನ ತಂದೆ ಮತ್ತು ಉಳಿದ ಮಕ್ಕಳು ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾನು ಈಗಾಗಲೇ ಕುಟುಂಬದಿಂದ ಹೊರಗೆ ಹೋಗಿರುವ ಕಾರಣ, ದಾವಾ ಆಸ್ತಿಳಲ್ಲಿ ಮತ್ತು ಕುಟುಂಬದ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಕೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಸಹೋದರಿಯರಿಗೆ ವಿಂಗಡಣೆ ಮಾಡಿಕೊಟ್ಟ ಸಿ ಶೆಡ್ಯೂಲ್ ಆಸ್ತಿಗಳ ಕುರಿತು ನನಗೆ ನಂತರದಲ್ಲಿ ಗೊತ್ತಾಗಿರುತ್ತದೆ. ಬಸಪ್ಪ ತಮ್ಮ ಜೀವಿತಾವಧಿಯಲ್ಲಿ ತಮ್ಮ ಆಸ್ತಿಗಳನ್ನು ವಿಲ್ ಮುಖಾಂತರ ಈಗಾಗಲೇ ವಿಲೇವಾರಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ ದಾನಪತ್ರದ ಮುಖಾಂತರ ಮತ್ತು ನನ್ನ ತಂದೆ ವಿಲ್ ಮುಖಾಂತರ ತಮ್ಮ ಎಲ್ಲಾ ಆಸ್ತಿಗಳನ್ನು ಈಗಾಗಲೇ ವಿಲೇವಾರಿ ಮಾಡಿದ್ದು, ಈ ವಿಷಯ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮೋಸ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿದ್ದಾರೆ ಎಂದು ಹೇಳುತ್ತಾರೆ. 2014 ರ ನಂತರದಲ್ಲಿ ನನ್ನ ತಾಯಿ ಒಬ್ಬಳೇ ಮನೆಯಲ್ಲಿದ್ದಾಗ ನಾನು ಅಕ್ರಮವಾಗಿ ಪ್ರವೇಶ ಮಾಡಿ ಆಕೆಯ ಮೇಲೆ ಹಲ್ಲೆ ಮಾಡಿದ ಕಾರಣ ಆಕೆ ನನ್ನವಿರುದ್ದ ಪಿರ್ಯಾದಿ ಸಹ ಕೊಟ್ಟಿದ್ದಳು ಎಂದರೆ ಸಾಕ್ಷಿ ನಾನು ಅವರ ಮನೆಗೆ ಹೋಗಿರಲಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ನೀಡಿದ ಪಿರ್ಯಾದಿಯ ಮೇಲೆ ಪ್ರಕರಣ

ದಾಖಲಾಗಿತ್ತು ಎಂದರೆ ಸರಿ, ಚಾರ್ಜ್ ಶೀಟ್ ಸಹ ಹಾಕಿದ್ದರು ಎಂದರೆ ಸರಿಯಲ್ಲ. ಪೋಲೀಸರು ನನಗೆ ಅನೇಕ ಬಾರಿ ಕರೆದು, ಎಚ್ಚರಿಕೆ ಕೊಟ್ಟಿದ್ದರು ಎಂದರೆ ಸಾಕ್ಷಿ ಆಸ್ತಿಗಾಗಿ ಹೋರಾಟ ಮಾಡಬೇಕಾಯಿತು ಎಂದು ಹೇಳುತ್ತಾರೆ. ನನ್ನ ತಾಯಿಗೆ ಸುಮಾರು 80 ವರ್ಷ ಇರಬಹುದು. ನನ್ನ ತಾಯಿಯ ಇಬ್ಬರೂ ಹೆಣ್ಣು ಮಕ್ಕಳು ಮದುವೆಯಾಗಿ ಅವರು ಗಂಡನ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿ ಮದುವೆಯಾಗಿದೆ ಎಂದು ಮಾತ್ರ ಗೊತ್ತಾಗಿದೆ ಎಂದು ಹೇಳುತ್ತಾರೆ. ನನ್ನ ತಾಯಿ ಈಗ ಅನಾರೋಗ್ಯ ಇರುವ ಕಾರಣ ತಮ್ಮ ಹೆಣ್ಣು ಮಕ್ಕಳ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ತವರು ಮನೆಯ ಕಡೆಯವರು ನನ್ನ ತಾಯಿಯ ಮನೆಗೆ ಬಂದಾಗ, ನಾನು ಅವರಿಗೂ ಸಹ ಬೆದರಿಸಿರುತ್ತೇನೆ ಎಂದರೆ ಸಾಕ್ಷಿ ಅವರು ಆಸ್ತಿಗಳನ್ನು ಬರೆಯಿಸಿಕೊಳ್ಳಲು ನನ್ನ ತಾಯಿಗೆ ಒತ್ತಾಯ ಮಾಡುತ್ತಿದ್ದು, ನಾನು ಆಸ್ತಿ ಉಳಿಸಿಕೊಳ್ಳಲು ಆ ರೀತಿ ಎಚ್ಚರಿಕೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಈ ವಿಷಯವನ್ನು ವಕೀಲರಿಗೆ ತಿಳಿಸಿದ್ದೆನು. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.